

# ಬೇಸಿಗೆ ಧಗೆ ಶ್ವಾನಗಳಿಗೆ ಸಜೆ

■ ರೂಪಾ ಕೆ.ಎಂ.

ಬೇಸಿಗೆಯ ಕಾವು ದಿನದಿಂದ ದಿನಕ್ಕೆ ಏರುತ್ತಲೇ ಇದೆ. ಮನುಷ್ಯರಾದವರು ಬಿಸಿಲಿನ ಬೇಗೆ ನೀಗಿಕೊಳ್ಳಲು ಹೊಸ ಹೊಸ ತಂತ್ರಗಳನ್ನು ಹೂಡಬಹುದು. ಆದರೆ ಮಾತು ಬಾರದ ಮೂಕಪ್ರಾಣಿಗಳ ಕಷ್ಟ ಹೇಳತೀರದು. ಬೇಸಿಗೆಯ ಧಗೆ ಅವುಗಳ ಆರೋಗ್ಯವನ್ನು ಹೈರಾಣು ಮಾಡುತ್ತಿದೆ.

ಸಾಕುಪ್ರಾಣಿಗಳಿಗೇನು, ಮನೆಯಲ್ಲಿ ಮನುಷ್ಯರಂತೆ ಆರಾಮಾಗಿ ಇರುತ್ತವೆ. ಮನುಷ್ಯ ಸಖ್ಯ ಹೆಚ್ಚಿರುವುದರಿಂದ ಇವುಗಳು ಸುರಕ್ಷಿತವಾಗಿರುತ್ತವೆ ಎಂದು ಬೀಸಿನ ಅಭಿಪ್ರಾಯ ಇಟ್ಟುಕೊಂಡಿರೋ ಕೆಟ್ಟರಿ. ಸಾಕುಪ್ರಾಣಿಗಳಿಗೆ, ಅದರಲ್ಲೂ ನಾಯಿಗಳು ಸನ್ ಸ್ಟ್ರೋಕ್‌ನಿಂದ ಅತಿ ಹೆಚ್ಚಾಗಿ ನರಳುತ್ತವೆ. ತುಸು ಎಚ್ಚರ ತಪ್ಪಿದರೂ ಅವುಗಳ ಪ್ರಾಣಕ್ಕೆ ಆಪತ್ತು ಬರಬಹುದು.

ವಿಪರೀತ ತಾಪಮಾನದಿಂದಾಗಿ ನಾಯಿಗಳಿಗೆ ಸಹಜವಾಗಿ ಏನನ್ನೂ ತಿನ್ನಲು ಆಗುವುದಿಲ್ಲ. ತಿಂದರೂ ಸರಿಯಾಗಿ ಜೀರ್ಣವಾಗದು. ತುಂಬಾ ಚಟುವಟಿಕೆಯಿಂದ ಇರುವ ನಾಯಿ ಕೂಡ ಆಯಾಸ, ಸುಸ್ತಿನಿಂದ ಬಳಲುತ್ತದೆ. ಒಂದೇ ಕಡೆ ಸುಮ್ಮನೆ ಕುಳಿತಿದ್ದು, ಚಟುವಟಿಕೆಹೀನವಾಗಿರುತ್ತದೆ.

## ಯಾವ ನಾಯಿಗಳಿಗೆ ತೊಂದರೆ?

ಹೀಟ್ ಸ್ಟ್ರೋಕ್‌ಗೆ ಅತಿ ಬೇಗ ತುತ್ತಾಗುವ ನಾಯಿಗಳೆಂದರೆ, ಬ್ರಾಕಿಸೆಫಾಲಿಕ್ ವರ್ಗಕ್ಕೆ ಸೇರಿದ ನಾಯಿಗಳು. ಅಂದರೆ, ಚಿಕ್ಕ ಮೂಗು/ಸಮತಟ್ಟಾದ ಮುಖ ಹೊಂದಿರುವ ನಾಯಿಗಳು. ಅತಿಯಾದ ತೂಕ ಹೊಂದಿರುವ, ಮುದಿಯಾಗಿರುವ, ಅತಿಯಾಗಿ ರೋಮಗಳನ್ನು ಹೊಂದಿರುವ ನಾಯಿಗಳಿಗೆ ಅಪಾಯ ತಪ್ಪಿದ್ದಲ್ಲ.

ಬ್ರಾಕಿಸೆಫಾಲಿಕ್ ವರ್ಗಕ್ಕೆ ಸೇರಿದ ನಾಯಿಗಳೆಂದರೆ ಪಗ್ಸ್, ಫ್ರೆಂಚ್ ಬುಲ್‌ಡಾಗ್ಸ್, ಇಂಗ್ಲಿಷ್ ಬುಲ್‌ಡಾಗ್ಸ್, ಬೋಸ್ಟನ್ ಟೆರ್ರಿಸ್, ಬಾಕ್ಸರ್, ಶಿಹ್‌ಟ್ಜು, ಕೇವಿಲಿಯರ್ ಕಿಂಗ್ ಚಾರ್ಲ್ಸ್ ಸ್ಪೇನಿಯಲ್, ಜಪಾನಿಸ್ ಚಿನ್, ಚೈನೀಸ್ ಪಗ್, ಲ್ಯಾಬ್ರಡಾರ್ ರಿಟ್ರೀವರ್, ಸೈಬೀರಿಯನ್ ಹಸ್ಕಿ, ನ್ಯೂಫೌಂಡ್‌ಲ್ಯಾಂಡ್, ಮಸ್ಟೀಫ್ ತಳಿಗಳು. ಈ ವರ್ಗಕ್ಕೆ ಸೇರಿದ ನಾಯಿಗಳ ಶ್ವಾಸಕೋಶಗಳು ಕಿರಿದಾಗಿರುತ್ತವೆ. ಹಾಗಾಗಿ ಉಸಿರಾಟ ಸಮಸ್ಯೆ ಬೇಗನೆ ಕಾಣಿಸಿಕೊಳ್ಳಬಹುದು. ದೇಹದ ತಾಪಮಾನವನ್ನು ನಿಯಂತ್ರಿಸುವ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ಮಾಡಲು ಇವುಗಳಿಗೆ ಸಾಧ್ಯವಾಗುವುದಿಲ್ಲ.

ಅತಿಯಾಗಿ ರೋಮವನ್ನು ಹೊಂದಿರುವ ಹಸ್ಕಿ, ಗೋಲ್ಡನ್ ರಿಟ್ರೀವರ್ಸ್ ಮತ್ತು ಸಮೊಯೆಡ್ಸ್ ತಳಿಗಳು ದಪ್ಪ ರೋಮವನ್ನು ಹೊಂದಿರುತ್ತವೆ. ಚಳಿಗಾಲದಲ್ಲಿ ಚಳಿಯಿಂದ ರಕ್ಷಣೆ ಸಿಕ್ಕಿದರೂ, ರೋಮಗಳಿಂದ ಬೇಸಿಗೆಯ ಬೇಗೆ ಹೆಚ್ಚುತ್ತದೆ. ಅತಿಯಾದ ತೂಕ ಹೊಂದಿರುವ ನಾಯಿಗಳ ದೇಹದಲ್ಲಿ ರಕ್ತ ಸಂಚಾರ ಸಾಮರ್ಥ್ಯ ಕಡಿಮೆಯಾಗುವುದರಿಂದ ದೇಹ ತನ್ನಿಂತಾನೇ ತಂಪಾಗುವ ಪ್ರಕ್ರಿಯೆ ವಿಳಂಬಗೊಳ್ಳಬಹುದು. ಇನ್ನು ವಯಸ್ಸಾದ ನಾಯಿಗಳಲ್ಲಿ ಹೃದಯ ಹಾಗೂ ಶ್ವಾಸಕೋಶಗಳು ಕೆಲಸ ಮಾಡುವ ಸಾಮರ್ಥ್ಯ ಕಡಿಮೆಯಾಗಿರುತ್ತದೆ. ಹೆಚ್ಚಿದ ತಾಪಮಾನವನ್ನು ನಿಭಾಯಿಸಲು ಈ ನಾಯಿಗಳಿಗೆ ಸಾಧ್ಯವಾಗುವುದಿಲ್ಲ.

ಡಾಲ್ಮೇಶಿಯನ್ ಅಥವಾ ಆಸ್ಟ್ರೇಲಿಯನ್ ಕ್ಯಾಟಲ್‌ಡಾಗ್, ಬಸೆಂಜಿಗಳು ಸೂರ್ಯನ

